# ಡಾ.ಸಲೀಂ ಅಲೀ ಪ್ರಾಣಿಶಾಸ್ತ್ರ ಸ್ಟಡಿ ಸರ್ಕಲ್ ನಿಂದ "OCEAN A MEGA ECOSYSTEM" ಬಗ್ಗೆ ವಿಶೇಷ ಉಪನ್ಯಾಸ











ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ, ಪ್ರಾಣಿಶಾಸ್ತ್ರ ವಿಭಾಗದಲ್ಲಿ ಡಾ.ಸಲೀಂ ಅಲೀ ಝೂವಾಲಜಿ ಸ್ಟಡಿ ಸರ್ಕಲ್ ನಿಂದ **ವಿಶೇಷ ಉಪನ್ಯಾಸವನ್ನು ದಿನಾಂಕ:–14/07/2023** ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಡಾ.ಶಿವಕುಮಾರ.ಹರಗಿ (ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ, ಸಾಗರ ಜೀವಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಾರವಾರ) ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಪ್ರೊ.ಜೆ.ಎಲ್.ಕಲ್ಯಾಣ ವಹಿಸಿದ್ದರು.

ಈ ಕಾರ್ಯಕ್ರಮದ ಪ್ರಾರ್ಥನಾ ಗೀತೆಯನ್ನು ವಿದ್ಯಾರ್ಥಿಯಾದ ಕುಮಾರ.ಭಿಮೇಶ ಹಾಡಿದರು ಮತ್ತು ಸ್ವಾಗತ ಭಾಷಣವನ್ನು ವಿಭಾಗದ ಮುಖ್ಯಸ್ಥರಾದ ಡಾ.ಆರ್.ಡಿ.ಸಣಕಲ್ ಹಾಗೂ ಅತಿಥಿಗಳ ಪರಿಚಯವನ್ನು ಡಾ.ಸಮೀರ.ಛಬ್ಬಿ ರವರು ನೆರವೇರಿಸಿ ಕೊಟ್ಟರು.

ಅತಿಥಿಗಳಾಗಿ ಆಗಮಿಸಿದ ಡಾ.ಶಿವಕುಮಾರ.ಹರಗಿ **"OCEAN A MEGA ECOSYSTEM"** ಈ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಅವರ ಉಪನ್ಯಾಸದಲ್ಲಿ ವಿದ್ಯಾರ್ಥಿಗಳಿಗೆ ಸಾಗರದ ರಚನೆ ಹಾಗೂ ಜೀವಿಗಳು ಮತ್ತು ಅವುಗಳ ವೈಶಿಷ್ಟತೆ, ಸಾಗರದ ಜೀವಸಂಪನ್ಮೂಲಗಳು, ಸಾಗರಾಳದಲ್ಲಿ ಸಂಶೋಧನಾ ಚಟುವಟಿಕೆಗಳ ಬಗ್ಗೆ ಹವಾಮಾನ ಬದಲಾವಣೆ ಮತ್ತು ವಾಯುಮಾಲಿನ್ಯದ ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು. ಈ ವಿಶೇಷ ಉಪನ್ಯಾಸದಿಂದ ಜೀವವಿಜ್ಞಾನ ವಿದ್ಯಾರ್ಥಿಗಳು ಪ್ರಯೋಜನ ಪಡೆದರು.

ಕೊನೆಯದಾಗಿ ಕಾರ್ಯಕ್ರಮದ ವಂದನಾರ್ಪಣೆಯನ್ನು ವಿದ್ಯಾರ್ಥಿ ಕಾರ್ಯದರ್ಶಿಯಾದ ಕುಮಾರ.ಕಿಶೋರ ನೆರವೇರಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಡಾ.ಎಸ್.ಎಸ್.ಮಂಗಳವೇಡೆ, ಡಾ.ಎಚ್.ಡಿ.ನೀಲಗುಂದ, ಡಾ.ನೀತಾ.ಕರಿ, ಶ್ರೀಮತಿ.ಚಿತ್ರಾ, ಡಾ.ಮನೋಹರ.ಪತ್ತಾರ, ಡಾ.ಕೀರ್ತಿ.ಹೊಸಮಠ, ಶ್ರೀ.ಅಂಬರೀಶ.ಸಿಂದಗಿ, ಡಾ.ಶ್ರೀನಿವಾಸ.ನೇಗಳೂರು, ಶ್ರೀ.ವಿಜಯ.ಹಿರೇಮನಿ, ಶ್ರೀ.ನವೀನ.ದಾಸರ, ಶ್ರೀ.ಮಂಜುನಾಥ.ಭಿಲಿಫ್, ಹಾಗೂ ವಿವಿಧ ವಿಭಾಗಗಳ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.